೭. ಪರಿಸರ ಮತ್ತು ನಮ್ಮ ಶಿಕ್ಷಣ

ನಮ್ಮ ಅತಿವಿದ್ಯಾವಂತರು ಮತ್ತು ಪರಿಸರ

ಹದಗೆಡುತ್ತಿರುವ ನಮ್ಮ ಭೂಮಿಯ ಪರಿಸರವನ್ನು ಕುರಿತು ಡೇವಿಡ್ ಓರ್ ಎಂಬ ಚಿಂತಕ ಮನೋಜ್ಞವಾಗಿ ಹೇಳುತ್ತಾನೆ. ಅದರ ಸಾರಾಂಶ ಹೀಗಿದೆ: ಎಂದಿನಂತೆ ಇಂದು ಕೂಡ ಸಂಜೆಯ ವೇಳೆಗೆ ನೂರಹದಿನಾರು ಚದರ ಕಿ.ಮೀ.ಗಳ ಮಳೆಯ ಕಾಡನ್ನು ನಾವು ಕಳೆದುಕೊಳ್ಳುತ್ತೇವೆ. ಜನಸಂಖ್ಯಾ ಸ್ಫೋಟದಿಂದಾಗಿ ಮರಳುಗಾಡುಗಳು ಇಂದು ಒಂದೇ ದಿನದಲ್ಲಿ ಎಪ್ಪತ್ತೆರಡು ಕಿ.ಮೀ.ಗಳಷ್ಟು ಅಗಲವಾಗಿ ವಿಸ್ತರಿಸುತ್ತಿವೆ. ನಲವತ್ತರಿಂದ ನೂರು ಜೀವಜಾತಿಗಳು ಈ ಭೂಮಿಯಿಂದ ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಸಿ.ಎಫ್.ಸಿ. ಅನಿಲ, ಇಂಗಾಲದ ಡೈ ಆಕ್ಸೈಡ್ ಅನಿಲಗಳು ಹೆಚ್ಚಾಗಿ ಜಾಗತಿಕ ತಾಪಮಾನ ಹೆಚ್ಚಾಗುತ್ತದೆ. ಓಝೋನ್ ಕವಚ ಶಿಥಿಲವಾಗುತ್ತಿದೆ. ಆತ ಮತ್ತೆ ಹೇಳುತ್ತಾನೆ: 'ಸತ್ಯವೇನೆಂದರೆ ಈ ಅವಘಡಗಳಿಗೆಲ್ಲಾ ಕಾರಣರಾದವರು ಅಲ್ಪವಿದ್ಯೆಯ ಬಹುಸಂಖ್ಯಾತ ಜನಸಾಮಾನ್ಯರಲ್ಲ; ಆದರೆ ವಿಶ್ವವಿದ್ಯಾಲಯಗಳಿಂದ ಬಿ.ಎ., ಬಿಎಸ್ಸಿ, ಎಲ್.ಎಲ್.ಬಿ. ಮತ್ತು ಪಿಎಚ್.ಡಿ ಪದವಿಗಳನ್ನು ಪಡೆದವರು. ನಮ್ಮ ಭೂಮಿಯ ಹವಾಗುಣ ವೈಪರೀತ್ಯಗಳಿಗೆ, ಜೀವವೈವಿಧ್ಯತೆದ ನಾಶಕ್ಕೆ, ಒಟ್ಟಿನಲ್ಲಿ ಇಡೀ ಭೂಮಂಡಲಕ್ಕೆ ಮಾರಕರಾಗಿರುವವರು ಈ ಪದವೀಧರರು'.

ಈ ಮಾತುಗಳನ್ನು ಕುರಿತು ನಾವು ಆಳವಾಗಿ ಚಿಂತಿಸಬೇಕಾಗಿದೆ. ಈ ಸರಳ ಸತ್ಯಗಳು ನಮ್ಮ ಗಮನಕ್ಕೆ ಬಂದರೂ ಅದನ್ನು ಗುರುತಿಸುವ ಶಕ್ತಿಯನ್ನು ನಮ್ಮ ಶಿಕ್ಷಣ ನಮಗೇಕೆ ಕೊಟ್ಟಿಲ್ಲ? ಈ ವಾಸ್ತವ ಪರಿಸ್ಥಿತಿಯನ್ನು ಅರಿವಿಗೆ ತಂದುಕೊಂಡು ರಚನಾತ್ಮಕವಾಗಿ ಸ್ಪಂದಿಸುವ ಶಕ್ತಿಯನ್ನೇಕೆ ಕೊಡುತ್ತಿಲ್ಲ? ಪುಸ್ತಕಜ್ಞಾನದ ಬೌದ್ಧಿಕ ಚಿಂತನೆಗಳ ವಿಫಲತೆಗಳನ್ನು ಕುರಿತು ಎಲಿವೈಸೆಲ್ ಎಂಬ ಮಹಾಶಯ ಹೀಗೆ ವಿವರಿಸುತ್ತಾನೆ – ಜರ್ಮನ್ನರು ಬಹುಶಃ ಪ್ರಪಂಚದಲ್ಲೆ ಅತ್ಯಂತ ಹೆಚ್ಚು ವಿದ್ಯಾವಂತರು. ಗಯಾಟೆ ಅಥವಾ ಕ್ಯಾಂಟ್‌ನಂತಹ ಚಿಂತಕರು ಈ ವಿದ್ಯಾವಂತರ ಮೇಲೆ ಬಹಳವಾದ ಪ್ರಭಾವ ಬೀರಿದ್ದಾರೆ. ಆದರೆ ಲಕ್ಷಾಂತರ ಜನಗಳ ಮಾರಣ ಹೋಮಕ್ಕೆ ಕಾರಣರಾದವರೂ ಇವರೇ. ಇವರು ಪಡೆದ ಶಿಕ್ಷಣ ಇವರಲ್ಲಿ ಮನುಷ್ಯತ್ವವನ್ನು ಬೆಳೆಸುವ ಬದಲಾಗಿ ಕ್ರೌರ್ಯವನ್ನು ಹೆಚ್ಚಿಸಿದ್ದು ಹೇಗೆ? ಇದಕ್ಕೆ ಉತ್ತರವಾಗಿ ವೈಸೆಲ್ ಹೇಳುತ್ತಾನೆ: "ಇವರ

ಶಿಕ್ಷಣವು ಮೌಲ್ಯಗಳಿಗೆ ಬದಲಾಗಿ ಶುಷ್ಕ ಸಿದ್ಧಾಂತಗಳಿಗೆ ಒತ್ತು ಕೊಡುತ್ತದೆ; ಮನುಷ್ಯನನ್ನು ಮುಖ್ಯ ಎಂದು ಗುರುತಿಸುವ ಬದಲು ಅವನ ಪರಿಕಲ್ಪನೆಗಳಿಗೆ ಒತ್ತು ಕೊಡುತ್ತದೆ; ಈ ಶಿಕ್ಷಣ ಅಮೂರ್ತ ಆಯಾಮಗಳ ಚಿಂತನೆಗಳಿಗೆ ಮಹತ್ತ್ವ ನೀಡಿದೆಯೇ ಹೊರತು ಆ ಚಿಂತನೆಗೆ ಕಾರಣವಾದ ಪ್ರಜ್ಞೆಯ ಕುರಿತು ಧ್ಯಾನಿಸಲಿಲ್ಲ; ಉತ್ತರಗಳಿಂದ ಪಡೆದ ತೃಪ್ತಿಯಲ್ಲಿ ಮುಖ್ಯವಾದ ಪ್ರಶ್ನೆಗಳನ್ನೇ ಬದಿಗೊತ್ತಲಾಗಿದೆ. ಅಂತಃಸಾಕ್ಷಿಗೆ ಬದಲಾಗಿ ದಕ್ಷತೆಗೆ, ಸಿದ್ಧಾಂತಗಳಿಗೆ ಪ್ರಾಮುಖ್ಯ ನೀಡಲಾಗಿದೆ.'

ಮನಸ್ಸಿಗೆ ಶಿಕ್ಷಣ

ಜರ್ಮನ್ ಅನುಭಾವಿ ಮೈಸ್ಟರ್ ಎಕಾರ್ಟ್ ಹೇಳುತ್ತಾನೆ– 'ಜನಗಳು ತಾವು ಏನು ಮಾಡಬೇಕು ಎಂಬುದಕ್ಕಿಂತ ತಾವು ಏನಾಗಿರಬೇಕು ಎಂಬುದರ ಬಗೆಗೆ ಚಿಂತಿಸಬೇಕು. ಒಂದು ವೇಳೆ ಅವರ ಬದುಕು ಉತ್ತಮವಾಗಿದ್ದರೆ ಅವರ ಕೆಲಸಗಳೆಲ್ಲ ಪ್ರಕಾಶಮಾನವಾಗಿ ಕಂಡುಬರುತ್ತವೆ': ಹಾಗೆಯೇ ಎಮರ್ಸನ್ ಹೇಳುವ ಮಾತು – "ನೀನು ಏನಾಗಿದ್ದೀಯೋ ಅದು ನನ್ನ ಕಿವಿಯಲ್ಲಿ ಎಷ್ಟು ಜೋರಾಗಿ ಮೊಳಗುತ್ತಿದೆ ಎಂದರೆ ನೀನು ಹೇಳುತ್ತಿರುವುದು ನನಗೆ ಕೇಳಿಸುತ್ತಲೇ ಇಲ". ಈ ಇಬ್ಬರು ಮಹಾಶಯರು ಮನುಷ್ಯನನ್ನು ಅವನು ಪಡೆದಿರುವ ಮೌಲ್ಯಗಳ ಆಧಾರದ ಮೇಲೆ ಗುರುತಿಸುತ್ತಾರೆ. ಈ ಮನುಷ್ಯ ರೂಪುಗೊಳ್ಳುವುದು ಹೇಗೆ? ಅವನ ಮನಸ್ಸು ಯಾವುದನ್ನು ನಾವು ನಿಜವಾದ ಶಿಕ್ಷಣ ಎಂದು ಗುರುತಿಸಬಹುದೊ ಆ ಶಿಕ್ಷಣ ವನ್ನು ಪಡೆದಾಗ. ಪ್ರಶ್ನೆಯೇನೆಂದರೆ ಶಿಕ್ಷಣ ನಮಗೆ ವಿಷಯವನ್ನು ತರ್ಕಬದ್ಧವಾಗಿ ಅರಿಯುವ ಮತ್ತು ಅದನ್ನು ಅಷ್ಟೇ ತರ್ಕಬದ್ಧವಾಗಿ ಮಂಡಿಸುವ ಶಕ್ತಿಯನ್ನು ಕೊಡುತ್ತದೆ. ಆದರೆ ಅದು ಮನುಷ್ಯನ ಮೂಲ ಮೃಗೀಯ ಸ್ವಭಾವಗಳನ್ನು ತೆಗೆದುಹಾಕಿ ಅದರ ಸ್ಥಾನದಲ್ಲಿ ಮಾನವೀಯ ಗುಣಗಳನ್ನು ತುಂಬಬಲ್ಲುದೆ?

ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಕೆಲವು ವಿಶ್ಲೇಷಣೆಗಳು ಮನೋಜ್ಞವಾಗಿವೆ. ಅವರು ಹೇಳುತ್ತಾರೆ: "ಪ್ರಪಂಚದಲ್ಲಿ ಎಲ್ಲ ಧರ್ಮಗಳ ನೀತಿಶಾಸ್ತ್ರಗಳು ಮನುಷ್ಯನಿಗೆ ಕೆಟ್ಟದ್ದನ್ನು ಮಾಡಬೇಡ ಎಂದು ಬೋಧಿಸುತ್ತವೆಯೇ ಹೊರತು ಕೆಟ್ಟದ್ದನ್ನು ಮಾಡದಂತೆ ನಮ್ಮನ್ನೇ ನಾವು ತಡೆಗಟ್ಟುವುದು ಹೇಗೆ ಎಂದು ಹೇಳಿ ಕೊಡುವುದಿಲ್ಲ. 'ಕದಿಯ ಬೇಡ' ಎನ್ನುತ್ತೇವೆ. ಆದರೆ ಒಬ್ಬ ಮನುಷ್ಯ ಏಕೆ ಕದಿಯುತ್ತಾನೆ?" ಸ್ವಾಮೀಜಿ ಹೇಳುತ್ತಾರೆ: "ಏಕೆಂದರೆ ಈ ಕದಿಯುವುದು ಸ್ವಯಂಚಾಲಿತವಾಗಿ ನಡೆಯುವ ಕ್ರಿಯೆ. ಎಂದರೆ ಈ ಸಂಬಂಧವಾದ ನೇತ್ಯಾತ್ಮಕ ಆಲೋಚನೆಗಳೆಲ್ಲ ಸುಪ್ತ ಮನಸ್ಸಿನಲ್ಲಿ ವಿಚಾರದ ಕೈಗೆಟುಕದೆ ದಾಖಲೆಯಾಗಿವೆ. ಮನುಷ್ಯ ಮಾಡುವ ದುಷ್ಟ ಕ್ರಿಯೆಗಳೆಲ್ಲ ಅವನ ಸುಪ್ತ ಮನಸ್ಸಿನ ಕೆಲಸ". ಅವರು ಹೇಳುತ್ತಾರೆ: 'ಈ ಸುಪ್ತಸ್ತರದ ನೇತ್ಯಾತ್ಮಕತೆಗಳು ಮನುಷ್ಯ ಕುಲವನ್ನೇ ಕೊಲ್ಲುತ್ತಿವೆ' ನಾವು ಕೆಟ್ಟದ್ದನ್ನು ಮಾಡದಂತೆ ನಮ್ಮನ್ನೆ ನಾವು ಕಾಪಾಡಿಕೊಳ್ಳಬೇಕಾದರೆ ನಮ್ಮ ಈ ಸುಪ್ತ ಮನಸ್ಸನ್ನು ಅರ್ಥ ಮಾಡಿಕೊಳ್ಳಲೇಬೇಕು.

ಅದರ ಬೇರುಗಳನ್ನು ಬಗೆದು ಶುಚಿ ಮಾಡಿಕೊಳ್ಳಬೇಕು. ಒಟ್ಟಿನಲ್ಲಿ ಹೇಳುವುದಾದರೆ ಮನುಷ್ಯ ಯಾವ ಕೌಶಲಗಳನ್ನು ಹೊಂದಿದ್ದಾನೆ ಎನ್ನುವುದಕ್ಕಿಂತ ಅವನು ತನ್ನ ಆಳದಲ್ಲಿ ಏನಾಗಿದ್ದಾನೆ ಎಂಬುದನ್ನು ಅವನೇ ಅರಿತು ನಡೆಯಬೇಕು.

ಸ್ವಾಮಿ ವಿವೇಕಾನಂದರು ಶಿಕ್ಷಣ ಎಂಬುದನ್ನು ಹೀಗೆ ವಿವರಿಸುತ್ತಾರೆ – "ಶಿಕ್ಷಣವೆಂದರೇನು? ಪುಸ್ತಕಜ್ಞಾನವೇ? ಅಲ್ಲ. ವಿವಿಧ ವಿಷಯಗಳನ್ನು ತಿಳಿಯುವುದೆ? ಅದೂ ಅಲ್ಲ. ಯಾವ ತರಬೇತಿಯ ಮೂಲಕ ಇಚ್ಛೆಯ ಹರಿವು ಮತ್ತು ಅಭಿವ್ಯಕ್ತಿಗಳನ್ನು ಹತೋಟಿಗೆ ತಂದುಕೊಂಡು ಸಾರ್ಥಕತೆ ಸಾಧಿಸಬಹುದೋ ಅದೇ ಶಿಕ್ಷಣ." ಹೀಗೆ ಶಿಕ್ಷಣವನ್ನು ನಾವು ಅರ್ಥಮಾಡಿಕೊಂಡರೆ ಶಿಕ್ಷಣ ಮನಸ್ಸಿನ ಮೂಲಪ್ರವೃತ್ತಿಗಳನ್ನು ನಿಯಂತ್ರಣಕ್ಕೆ ತರುವ ಸಾಧನ ಎಂದು ನಾವು ಭಾವಿಸಬೇಕಗುತ್ತದೆ. ಇದನ್ನು ಹೇಗೆ ಸಾಧಿಸಬೇಕು ಎಂದೂ ಸಹ ಸ್ವಾಮೀಜಿ ವಿವರಿಸುತ್ತಾರೆ. ನಮ್ಮ ಮನಸ್ಸಿನ ವೃತ್ತಿಗಳು ಎಂದರೆ ಆಲೋಚನೆಗಳನ್ನು ನಾವು ನಿಯಂತ್ರಿಸುವ ಸಾಧ್ಯತೆಯ ಬಗ್ಗೆ ನಾವು ಚಿಂತಿಸಿಯೇ ಇಲ್ಲ. ಮೊದಮೊದಲು ಎಲ್ಲರಿಗೂ ಜನಹಿತವಾದದ್ದನ್ನು ಸಾಧಿಸಬೇಕೆಂಬ ಹಂಬಲ ಇರುತ್ತದೆ. ಆದರೆ ಅಂತರಂಗದ ನೇತ್ಯಾತ್ಮಕತೆ ಇದಕ್ಕೆ ಎಡೆಮಾಡಿಕೊಡುವುದಿಲ್ಲ. ಆದ್ದರಿಂದ ನಮ್ಮ ಆಲೋಚನೆಗಳನ್ನು ನಾವು ಬುದ್ಧಿಪೂರ್ವಕವಾಗಿ ನಿಯಂತ್ರಿಸಬೇಕು. ಇದನ್ನು ಸಾಧ್ಯವಾಗಿಸುವುದು ಹೇಗೆ ಎಂಬುದನ್ನು ಎಂದು ಸ್ವಾಮೀಜಿ ತಿಳಿಸುತ್ತಾರೆ:

"ನಾವು ನಮ್ಮೊಳಗಿನ ಆಲೋಚನೆಗಳು ಹುಟ್ಟಿ ಕವಲೊಡೆದ ಮೇಲಷ್ಟೆ ಅವುಗಳನ್ನು ಅರಿವಿಗೆ ತಂದುಕೊಳ್ಳುತ್ತೇವೆ; ಕೆಲವೊಮ್ಮೆ ಅವು ಕ್ರಿಯಾರೂಪಕ್ಕೆ ಇಳಿದ ಮೇಲಷ್ಟೆ ಗ್ರಹಿಸುತ್ತೇವೆ. ಹಾಗಾಗಿ ನಮ್ಮ ಆಲೋಚನೆಗಳನ್ನು, ಕ್ರಿಯೆಗಳನ್ನು ನಿಯಂತ್ರಿಸುವುದು ನಮ್ಮ ಕೈಲಿಲ್ಲ ಎಂದು ಹುಯಿಲಿಡುತ್ತೇವೆ. ಹಾಗಾದರೆ ಈ ನಮ್ಮ ಆಲೋಚನೆಗಳನ್ನು ನಿಯಂತ್ರಿಸಲು ಸಾಧ್ಯವೇ ಇಲ್ಲವೆ? ಒಂದು ವೇಳೆ ನಾವು ಎಚ್ಚರವಾಗಿದ್ದು ಆಲೋಚನೆಗಳ ಅಂಕುರವಾಗುತ್ತಿದ್ದಂತೆಯೇ, ಅದು ಕ್ರಿಯೆಗೆ ಕೊಂಡೊಯ್ಯುವ ಮೊದಲೇ ನಿಯಂತ್ರಣಕ್ಕೆ ತಂದುಬಿಟ್ಟರೆ? ಆಗ ನಾವು ನಮ್ಮ ಮೇಲೆ ಸಮಗ್ರವಾದ ನಿಯಂತ್ರಣವನ್ನು ಸಾಧಿಸಬಹುದು. ಈಗ ಪ್ರಶ್ನೆ ಏನೆಂದರೆ ಮನಸ್ಸಿನ ಸೂಕ್ಷ್ಮ ಚಲನೆಯನ್ನು ವಿಶ್ಲೇಷಿಸಿ, ಪರೀಕ್ಷೆಗೆ ಒಳಪಡಿಸಿ, ಅರ್ಥಮಾಡಿಕೊಂಡು ನಿಯಂತ್ರಿಸುವ ವಿಧಾನವೇನಾದರೂ ಇದ್ದರೆ ಆಗ ಮಾತ್ರ ನಮ್ಮನ್ನು ನಾವು ನಿಗ್ರಹಕ್ಕೆ ಒಳಪಡಿಸಬಹುದು. ಹೀಗೆ ಯಾವ ಮನುಷ್ಯ ತನ್ನ ಮನಸ್ಸನ್ನು ಸಂಪೂರ್ಣ ಹಿಡಿತದಲ್ಲಿಟ್ಟುಕೊಂಡಿದ್ದಾನೋ ಅವನು ಎಲ್ಲ ಮನಸ್ಸುಗಳನ್ನು ನಿಯಂತ್ರಿಸಬಲ್ಲ. ಈ ಕಾರಣದಿಂದ ಪರಿಶುದ್ಧತೆ ಮತ್ತು ಸನ್ನಡತೆಗಳು ಧರ್ಮದ ಮೂಲ ಉದ್ದೇಶ. ನೀತಿವಂತನಾದ, ಪರಿಶುದ್ಧನಾದ ಮನುಷ್ಯ ತನ್ನನ್ನೇ ತಾನು ನಿಯಂತ್ರಿಸಿಕೊಳ್ಳುತ್ತಾನೆ".

ಸ್ವಾಮೀಜಿಯವರ ಮೇಲಿನ ಹೇಳಿಕೆಯಲ್ಲಿ ಗುರುತಿಸಬೇಕಾದ ಮುಖ್ಯಾಂಶವೇನೆಂದರೆ, ನಾವು ನಮ್ಮ ಆಲೋಚನೆಗಳ ಒಡೆಯರು; ಆಲೋಚನೆಗಳು ಮಾತ್ರವೇ ತತ್ಸಮಾನವಾದ

ಕ್ರಿಯೆಗೆ ಕೊಂಡೊಯ್ಯುತ್ತವೆ. ಆದ್ದರಿಂದ ವ್ಯಕ್ತಿಗತ ನೆಲೆಯಲ್ಲಿ ಪ್ರತಿಯೊಬ್ಬನೂ ಮಾಡಬಹುದಾದ ಒಂದು ಗುಣಾತ್ಮಕ ಕೆಲಸ ಎಂದರೆ ತನ್ನ ಆಲೋಚನೆಗಳನ್ನು ತಾನೇ ನಿಯಂತ್ರಿಸಿಕೊಳ್ಳುವುದು. ಹೀಗೆ ನಿಯಂತ್ರಿಸಲು ಒಂದು ಆಧಾರ ಬೇಕಲ್ಲವೆ? ನಿಯಂತ್ರಿಸುವುದು ಎಂದರೆ ಬೇಕಾದ್ದನ್ನು ಆರಿಸಿಕೊಂಡು ಬೇಡವಾದ್ದನ್ನು ತ್ಯಜಿಸುವುದು. ಈ ಆಯ್ಕೆಗೆ ಆಧಾರವಾದರೂ ಯಾವುದು? ಸ್ವಾಮೀಜಿಯವರ ಪ್ರಕಾರ ಧರ್ಮಮೂಲದ ಪಾವಿತ್ರ್ಯ ಮತ್ತು ಸನ್ನಡತೆಗಳು ಈ ಆಯ್ಕೆಗೆ ಇರುವ ಏಕಮಾತ್ರ ಸಾಧನ. ಮನಸ್ಸು ಸರಳವಾಗಿದ್ದರೆ 'ಮನವರಿಯದ ಕಳ್ಳತನವಿಲ್ಲ' ಎಂಬ ಸತ್ಯ ನಮಗೆ ಗೋಚರಿಸುತ್ತದೆ. ಬುದ್ಧಿಪೂರ್ವಕವಾಗಿ ಅಪ್ರಾಮಾಣಿಕವಾಗಿ ನಡೆದುಕೊಳ್ಳಬೇಕೆಂಬ ಇರಾದೆ ಇಲ್ಲದಿದ್ದರೆ ಆಯ್ಕೆಗಳ ಬಗ್ಗೆ ಗೊಂದಲ ಉಂಟಾಗುವುದಿಲ್ಲ. ಆಗ ಮನಸ್ಸಿನ ನಿಯಂತ್ರಣ ಸಾಧ್ಯವಾದೀತು.

ಈ ಬಗೆಯ ಮನೋನಿಯಂತ್ರಣದ ಸಾಧ್ಯತೆಯನ್ನು ನಮ್ಮ ಶಿಕ್ಷಣ ಗುರುತಿಸುತ್ತಿಲ್ಲ. ಹಾಗಾಗಿ ನಾವು ನಮಗೇ ಅಪರಿಚಿತರಾಗಿ ಉಳಿಯಲು ಶಿಕ್ಷಣ ಸಹಾಯ ಮಾಡುತ್ತಿರುವಂತಿದೆ. ನಮ್ಮ ನೈಜ ನೆಲೆಗಳಿಂದ ದೂರ ಕೊಂಡೊಯ್ಯುವ ಹಡಗಿನಂತಿದೆ. ಇದು ಹೀಗೇಕೆ? ನಮ್ಮ ಅಂತರಾಳದ ಇತ್ಯಾತ್ಮಕ ಸಾಧ್ಯತೆಗಳನ್ನು ಅದು ಗುರುತಿಸುವುದಿಲ್ಲ; ಪಾವಿತ್ರ್ಯವನ್ನು ಗುರುತಿಸುವುದಿಲ್ಲ; ಒಬ್ಬ ಮನುಷ್ಯ ತನ್ನಲ್ಲಿರುವ ಕಲ್ಮಶಗಳನ್ನೆಲ್ಲಾ ತೊಳೆದುಕೊಂಡು ಪವಿತ್ರನಾಗಬಲ್ಲ ಎಂಬುದನ್ನು ಗುರುತಿಸುವುದಿಲ್ಲ; ಏಕಾಏಕಿ ಪವಿತ್ರ–ಅಪವಿತ್ರಗಳಾಚೆಯ ಸ್ಥಿತಿಯ ಬಗ್ಗೆ ಮಾತನಾಡುವ ಬೌದ್ಧಿಕ ಚತುರತೆಯನ್ನು ಗಳಿಸುತ್ತೇವೆ. ಶೋಪನ್ ಹೊವರ್ ಮತ್ತು ಕ್ಯಾಂಟ್ ಅವರುಗಳ ಚಿಂತನೆಗಳು ಹೀಗೆ ಆಳವಾದ ತರ್ಕ ಸರಣಿಯನ್ನು ಮುಂದಿಡುತ್ತ ವಾಸ್ತವದಲ್ಲಿ ಒಳ್ಳೆಯದು–ಕೆಟ್ಟದ್ದು ಇಲ್ಲ ಎಂಬುದಾಗಿ ಪ್ರತಿಪಾದಿಸುತ್ತವೆ. ಒಳ್ಳೆಯ ಮತ್ತು ಕೆಟ್ಟ ಸ್ಥಿತಿಯನ್ನು ದಾಟಿ ಎಲ್ಲರೂ ಸ್ಥಿತಪ್ರಜ್ಞ ಸ್ಥಿತಿಯಲ್ಲಿದ್ದರೆ ಶಿಕ್ಷಣದ ಅಗತ್ಯವೇ ಇರುತ್ತಿರಲಿಲ್ಲ. ಹಾಗಾಗಿ ಊಹೆಯ ಮಾತುಗಳಿಗಿಂತ ದಿನನಿತ್ಯದ ಬದುಕಿನಲ್ಲಿ ಕ್ಷಣಕ್ಷಣವೂ ಎದುರಿಸುವ ಸಂದಿಗ್ಧಗಳಿಗೆ ಯುಕ್ತವಾಗಿ ಸ್ಪಂದಿಸುವ ವಿವೇಕವನ್ನು ನಾವು ನಿರೀಕ್ಷಿಸಲೇಬೇಕು; ಅಗತ್ಯವಾದ ಪವಿತ್ರತೆಯನ್ನು ನಿರೀಕ್ಷಿಸಲೇಬೇಕು. ಬೌದ್ಧಿಕ ಕಸರತ್ತುಗಳಿಗೇ ಪ್ರಾಧಾನ್ಯತೆ ನೀಡಿ ಪಾವಿತ್ರ್ಯವನ್ನು ಗಳಿಸಲು ಮಾಡಬೇಕಾದ ತ್ಯಾಗಗಳನ್ನು ಗೌಣ ಎಂದು ಪರಿಗಣಿಸಿ ಸ್ವೇಚ್ಛಾಚಾರಕ್ಕೆ ಪರವಾನಗಿ ಪಡೆಯುವುದು ವಿವೇಕವಲ್ಲ.

ಇಂದು 'ಕಾನೂನು' ಮಾತ್ರ ನಮ್ಮನ್ನು ನೇತ್ಯಾತ್ಮಕ ಕೆಲಸಗಳಿಂದ ತಡೆಯುವ ಏಕಮಾತ್ರ ಸಾಧನವಾಗಿ ವ್ಯವಸ್ಥೆಯಲ್ಲಿದೆ. ನಮ್ಮ ಶಿಕ್ಷಣ ಕಾನೂನಿಗೆ ಹೆಚ್ಚು ಒತ್ತು ಕೊಡುತ್ತದೆ, ಕಾನೂನಿನ ಸಾಧ್ಯತೆಗಳನ್ನು ಮಾತ್ರ ಗುರುತಿಸುತ್ತದೆ. ಕಾನೂನಿನ ಹೊರತಾಗಿಯೂ, ಮೂಲಭೂತವಾಗಿ ಮನುಷ್ಯನನ್ನು ಒಳ್ಳೆಯವನನ್ನಾಗಿ ಮಾಡಬಹುದಾದ ಸಾಧ್ಯತೆಗಳನ್ನು ಗುರುತಿಸಲು ಶಿಕ್ಷಣ ವಿಫಲವಾಗಿದೆ. ಬಲವಾದ ಕಾನೂನುಗಳು ಮನುಷ್ಯ ದಾರಿ ತಪ್ಪದಂತೆ ನೋಡಿಕೊಳ್ಳುವುದು ನಿಜವಾದರೂ ಎಷ್ಟೇ

ಕಾನೂನುಗಳು ಇದ್ದರೂ ಮನುಷ್ಯನ ಮೂಲಭೂತ ಒಳ್ಳೆಯತನವೇ ಕಟ್ಟಕಡೆಗೆ ಫಲ ಕೊಡುತ್ತದೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಹೇಳುವ ಮಾತುಗಳನ್ನು ಗಮನಿಸಬೇಕು: "ಸಾಮಾಜಿಕವೇ ಆಗಿರಲಿ, ರಾಜಕೀಯವೇ ಆಗಿರಲಿ, ಮೂಲಭೂತವಾಗಿ ಎಲ್ಲ ವ್ಯವಸ್ಥೆಗಳು ಆಧರಿಸುವುದು ಮನುಷ್ಯನ ಒಳ್ಳೆಯತನವನ್ನು. ಸರ್ಕಾರ ಈ ಕಾನೂನನ್ನೋ, ಆ ಕಾನೂನನ್ನೋ ಜಾರಿಗೊಳಿಸುತ್ತದೆ ಎಂಬ ಕಾರಣಕ್ಕಾಗಿ ಒಂದು ರಾಷ್ಟ್ರ ಶ್ರೇಷ್ಠವಾಗುವುದಿಲ್ಲ. ಹಾಗಾಗುವುದಿದ್ದರೆ ಅಲ್ಲಿನ ಜನ ಶ್ರೇಷ್ಠರು ಅಥವಾ ಒಳ್ಳೆಯವರು ಎಂಬ ಕಾರಣಕ್ಕಾಗಿ".

ನಮ್ಮ ಉದ್ಯಮಗಳು ಮತ್ತು ಹಸಿರು ಭೂಮಿ

ಅದೊಂದು ಬಹಳ ದೊಡ್ಡ ಸಭೆ. ಉದ್ಯಮಶೀಲ ಎಂ.ಬಿ.ಎ. ವಿದ್ಯಾರ್ಥಿಗಳಿಗೆ ಅವರ ಸಾಮಾಜಿಕ ಕಳಕಳಿಯ ಸಾಧನೆಗಳನ್ನು ಗಮನಿಸಿ ಪ್ರಶಸ್ತಿಗಳನ್ನು ನೀಡಲಾಗುತ್ತಿತ್ತು. ಭಾರತದ ಬಹುದೊಡ್ಡ ಉದ್ಯಮಿಯೊಬ್ಬರು ಯುವಕರಿಗೆ ಬುದ್ಧಿವಾದ ಹೇಳುತ್ತಿದ್ದರು. ಅವರ ಬುದ್ಧಿವಾದ ಹೀಗೆ ಸಾಗಿತ್ತು: "ಹಣ ಸಂಪಾದಿಸುವುದನ್ನು ಎಂದೂ ನಿಲ್ಲಿಸಬೇಡಿ; ಹೆಚ್ಚು ಹೆಚ್ಚು ಹಣ ಸಂಪಾದಿಸಿ. ಬೇಕಾದರೆ ಅದನ್ನು ದಾನ ಮಾಡಿ. ಆದರೆ ಹಣ ಸಂಪಾದಿಸುವುದನ್ನು ಮಾತ್ರ ನಿಲ್ಲಿಸಬೇಡಿ. ನಿಮ್ಮ ವಾಣಿಜ್ಯೋದ್ಯಮ ಸದಾ ಬೆಳೆಯುತ್ತಿರಬೇಕು. ಮತ್ತು ಉದ್ಯಮಗಳಿಗೆ ಇದೊಂದೇ ದಾರಿ. ಬೆಳೆಯುವುದನ್ನು ನಿಲ್ಲಿಸಿದರೆ ಸಾವು ಖಚಿತ, ಆದ್ದರಿಂದ ನಿಮ್ಮ ಉದ್ಯಮ ಸದಾ ಬೆಳೆಯುತ್ತಿರುವಂತೆ ನೋಡಿಕೊಳ್ಳಿ. ಕನಿಷ್ಠ ಐದುನೂರು ವರ್ಷಗಳಾಚೆಗೆ ನಿಮ್ಮ ಉದ್ಯಮದ ಸ್ವರೂಪ ಹೇಗಿರಬೇಕೆಂದು ಒಂದು ದರ್ಶನ, ಒಂದು ಕಾಣ್ಕೆ ನಿಮಗೆ ಇರಲಿ. ಯಾವಾಗಲೂ ದೊಡ್ಡ ಬಹುದೊಡ್ಡ ಕನಸನ್ನು ಕಾಣಿರಿ. ನಿಮ್ಮ ಕನಸನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಿ..."

"ಆದರೆ ಸ್ನೇಹಿತರೆ, ಎಲ್ಲವನ್ನೂ ನೈತಿಕ ಚೌಕಟ್ಟಿನಲ್ಲೇ ಸಾಧಿಸಿ. ಅನೈತಿಕ ಮಾರ್ಗ ಹಿಡಿಯುವುದು ಬೇಡ. ನಾವು ಎಲ್ಲ ಧರ್ಮಗಳನ್ನು ಗೌರವಿಸೋಣ, ಎಲ್ಲ ದೇಶದವರನ್ನೂ ಗೌರವಿಸೋಣ. ಎಲ್ಲಿ ಕೋಮು ಸೌಹಾರ್ದ ಇಲ್ಲವೋ ಅಲ್ಲಿ ಆರ್ಥಿಕ ಪ್ರಗತಿ ಸಾಧ್ಯವಿಲ್ಲ. ಆದ್ದರಿಂದ ಆರ್ಥಿಕ ಪ್ರಗತಿ ಸಾಧಿಸಬೇಕಾದರೆ ಜಾತ್ಯತೀತ ಮನೋಧರ್ಮ ಬೇಕು. ನಾವು ಎಲ್ಲ ದೇಶಗಳನ್ನು ಗೌರವಿಸೋಣ. ಎಲ್ಲ ದೇಶದ, ಎಲ್ಲ ಧರ್ಮಗಳ, ಎಲ್ಲ ಜನಾಂಗಗಳ ಜನರನ್ನು ಗೌರವಿಸೋಣ. ಕೋಮು ಸೌಹಾರ್ದ ಇರುವಲ್ಲಿ ಮಾತ್ರ ನಮ್ಮ ಉದ್ಯಮಗಳನ್ನು ಕಟ್ಟೋಣ. ನಮ್ಮ ಉದ್ಯಮ ರಾಷ್ಟ್ರೀಯ ಗಡಿಗಳಿಂದಾಚೆಗೆ ಅಂತಾರಾಷ್ಟ್ರೀಯವಾಗಿ ಬೆಳೆಯಬೇಕು. ಜಾಗತೀಕರಣ ಎಂದರೆ ಏನು ಗೊತ್ತೆ? ಎಲ್ಲಿ ಕಚ್ಚಾ ಪದಾರ್ಥಗಳು ಸುಲಭ ಬೆಲೆಯಲ್ಲಿ ಸಿಗುತ್ತದೋ ಅಲ್ಲಿ ಅದನ್ನು ಕೊಂಡು, ಎಲ್ಲಿ ಶ್ರಮಿಕರು ಕಡಿಮೆ ಬೆಲೆಯಲ್ಲಿ ಸಿಗುತ್ತಾರೋ ಮತ್ತು ಕೌಶಲವನ್ನು ಪಡೆದಿದ್ದಾರೋ

ಅಲ್ಲಿ ವಸ್ತುಗಳನ್ನು ತಯಾರಿಸಿ, ಅತ್ಯಂತ ಹೆಚ್ಚು ಬೆಲೆ ಎಲ್ಲಿ ದೊರೆಯುತ್ತದೋ ಅಲ್ಲಿ ಮಾರುವುದು. ಇದೇ ಜಾಗತೀಕರಣ.

"ಆದರೆ, ಸ್ನೇಹಿತರೆ, ಈ ಭೂಮಿ ಹಸಿರಾಗಿಯೇ ಉಳಿಯಬೇಕು. ನಮ್ಮ ಮಕ್ಕಳು, ಮೊಮ್ಮಕ್ಕಳು ಬದುಕಿ ಬಾಳಲು ಹಸನಾಗಿರಬೇಕು. ಇಂಗಾಲದ ಡೈ ಆಕ್ಸೈಡನ್ನು ಹೆಚ್ಚಾಗಿ ವಾತಾವರಣಕ್ಕೆ ಬಿಡುಗಡೆ ಮಾಡಿ ಜಾಗತಿಕ ತಾಪಮಾನಕ್ಕೆ ಕಾರಣರಾಗುವುದು ಬೇಡ. ಇರುವುದು ಒಂದೇ ಭೂಮಿ. ಇದನ್ನು ನಾವು ಹಾಳುಗೆಡಹುವುದು ಬೇಡ."

ಹೀಗೇ – ಭಾಷಣ ಸಾಗುತ್ತಿತ್ತು. ದೊಡ್ಡದಾದ ಕನಸನ್ನು ಕಾಣುವುದೇ ಆದರ್ಶ ಎಂಬ ಈ ಭಾಷಣವನ್ನು ಕೇಳಿ ಸ್ಫೂರ್ತಿಗೊಂಡ ಯುವಕರು ಆಗಾಗ ಶಿಳ್ಳೆ ಹಾಕುತ್ತಿದ್ದರು, ಕರತಾಡನ ಮಾಡುತ್ತಿದ್ದರು. ಬಹುಶಃ ಅವರಲ್ಲಿ ಈ ಸ್ಫೂರ್ತಿಯುತವಾದ ಭಾಷಣ ಕೇಳಿ ಹೊಸ ಕನಸುಗಳು ಆಗಲೇ ಅಂಕುರವಾಗಿಬಿಟ್ಟಿದ್ದವು. ಅಲ್ಲಿ ಸೇರಿದ್ದ ಯಶಸ್ವಿ ಉದ್ಯಮಿಗಳು ಭಾಷಣಕಾರನ ಸಾಧನೆಗಳನ್ನು ಕಂಡು ಕೇಳಿ ದಂಗಾಗಿಹೋಗಿದ್ದರು. ನವ ಉತ್ಸಾಹ ತುಂಬಿತುಳುಕುತ್ತಿದ್ದ ಆ ವಾತಾವರಣದಲ್ಲಿ ಬದುಕಿನ ಬಹುಮುಖ್ಯ ಪ್ರಶ್ನೆಗಳು ಅಪ್ರಸ್ತುತ ಎನಿಸುವಷ್ಟು ಅಂಚಿಗೆ ಹೋಗಿ ನಿಂತಿದ್ದವು.

ಈ ಸಂದರ್ಭದಲ್ಲಿ ನಮ್ಮನ್ನು ಕಾಡುವ ಪ್ರಶ್ನೆಗಳು ಯಾವುವೆಂದರೆ – ಎಣೆಯಿಲ್ಲದ ಆರ್ಥಿಕ ಪ್ರಗತಿ ಮತ್ತು ಹಸಿರು ಭೂಮಿ ಒಟ್ಟಿಗೆ ಇರಲು ಸಾಧ್ಯವೆ? ಪ್ರತಿಯೊಬ್ಬನೂ ದೊಡ್ಡದಾಗಿ ಬೆಳೆಯುವ ಕನಸು ಹೊತ್ತು ಹೊರಟರೆ, ಎಂದರೆ ಎಲ್ಲರೂ ಬಿಲಿಯನ್ ಡಾಲರ್ ಬಿಸಿನೆಸ್‌ಗಳನ್ನು ಬೆಳೆಸಿದರೆ, ಈ ಭಾರವನ್ನು ನಮ್ಮ ಭೂಮಿ ಹೇಗೆ ತಾನೆ ತಾಳಿಕೊಳ್ಳಬಲ್ಲುದು? ಈ ಉದ್ಯಮಕ್ಕೆ ಹೊಂದಿಕೊಂಡು ಯಥೇಚ್ಛವಾದ ಹಣಕ್ಕೆ ಪಾಲುದಾರರಾದ ಶ್ರೀಮಂತರ ಸಂಖ್ಯೆ ಹೆಚ್ಚಾಗುವುದು ಅನಿವಾರ್ಯ. ಇವರು ತಮ್ಮ ಹಣಬಲದಿಂದ ಪ್ರಕೃತಿ ಸಂಪನ್ಮೂಲಗಳನ್ನು ಧ್ವಂಸ ಮಾಡುವ ದುಷ್ಟಶಕ್ತಿಗಳಾಗಿ ಪರಿಣಮಿಸುವುದಿಲ್ಲವೆ? ಈ ಭಾಷಣದಲ್ಲಿ ಸಮಷ್ಟಿ ಜವಾಬ್ದಾರಿಯ ಕುರಿತು ಮಾತುಗಳಿದ್ದರೂ ಆ ಮಾತುಗಳು ತಮ್ಮ ಉದ್ಯಮಕ್ಕೆ ಕಳಂಕ ಬರದಿರಲು ಕನಿಷ್ಠ ಎಷ್ಟು ಬೇಕೋ ಅಷ್ಟು ಮಾತ್ರ. ಕೋಮುಸೌಹಾರ್ದ ಬೇಕಾದದ್ದು ಆರ್ಥಿಕ ಪ್ರಗತಿ ಸಾಧಿಸಲು. ಮನುಷ್ಯನ ನೆಮ್ಮದಿಗಾಗಿ ಈ ಮೌಲ್ಯ ಎಂಬುದು ಈ ಸಂದರ್ಭದಲ್ಲಿ ಎರಡನೆಯ ಮಾತು. ಅಂತಾರಾಷ್ಟ್ರೀಯ ಸೌಹಾರ್ದ, ಇತರ ಮನುಷ್ಯರ ಬಗ್ಗೆ ಗೌರವ ಇತ್ಯಾದಿಗಳು ಉದ್ಯಮವಿಸ್ತರಣೆಗೆ ಎಷ್ಟು ಬೇಕೊ ಅಷ್ಟು ಇದ್ದರೆ ಸಾಕು. ಒಟ್ಟಿನಲ್ಲಿ ಉದ್ಯಮವೊಂದು ಬೆಳೆಯುತ್ತಿದ್ದರೆ ಸಾಕು ಉಳಿದೆಲ್ಲವೂ ಸುಸೂತ್ರ ಎಂಬ ನಂಬಿಕೆ ಇದು. ಇಲ್ಲಿ ಮನಷ್ಯ ಉದ್ಯಮದ ಪರ್ಯಾಯರೂಪವಾಗಿಬಿಡುತ್ತಾನೆ. ಉದ್ಯಮದ ಹೊರತಾಗಿ ಅವನಿಗೆ ಬೇರೆಯಾದ ಅಸ್ತಿತ್ವವೇ ಇಲ್ಲ! ಮೌಲ್ಯಗಳನ್ನು ಸರಕು ಸಮೃದ್ಧಿಗಾಗಿ ಬಳಸಿಕೊಳ್ಳುವ ಏಕಮಾತ್ರ ಉದ್ದೇಶ ಈ ಮೌಲ್ಯ ಪ್ರತಿಪಾದನೆಯ ಹಿಂದೆ ಇದೆ. ಅಲ್ಲದೆ ಪರಿಸರದ ಕಾಳಜಿಗಳ ಬಗ್ಗೆ ಮಾತನಾಡುವ ಮೂಲಕ ಸುಲಭವಾಗಿ ಆ ಸಂಬಂಧದ

ಅಪರಾಧಿ ಪ್ರಜ್ಞೆಯನ್ನು ಶಮನ ಮಾಡಿಕೊಳ್ಳಬಹುದು. ಬದುಕುವುದಕ್ಕಿಂತ ಉದ್ಯಮ ಬೆಳೆಸುವುದು, ಹಣ ಗಳಿಸುವುದು ಬಹಳ ಮುಖ್ಯ ಎಂದು ಭಾವಿಸುವುದು ಇಂದಿನ ಜನಪ್ರಿಯ ಮೌಲ್ಯವಾಗಿರುವುದಕ್ಕೆ ಕಾರಣ ನಮ್ಮ ನಡುವೆ ಇರುವ ಇಂತಹ ಯಶಸ್ವೀ ಉದ್ಯಮಿಗಳು. ಈ ಉದ್ಯಮಿಗಳ ಜೀವನದೃಷ್ಟಿ ನಮ್ಮ ಯುವಜನತೆಯ ಜೀವನಾದರ್ಶವಾಗುವುದಾದರೆ, ಇವರು ನಮ್ಮ ಶಿಕ್ಷಣವನ್ನು ನಿಯಂತ್ರಿಸುವುದಾದರೆ, ಹುಟ್ಟುವ ಸುಶಿಕ್ಷಿತರು ಹೇಗಿರಬಹುದೆಂದು ಊಹಿಸಬಹುದಲ್ಲವೆ?

ಭಾಷಣಕಾರನಾದ ಈ ಉದ್ಯಮಿ ವೈಯಕ್ತಿಕ ಬದುಕಿನಲ್ಲಿ ಮೌಲ್ಯವಂತನೇ ಆದರೂ ಉದ್ಯಮದ ಬದುಕಿನಲ್ಲಿ ಆತನ ಬದ್ಧತೆ ಉದ್ಯಮಕ್ಕೆ ಮತ್ತು ಗ್ರಾಹಕರಿಗೆ ಸೀಮಿತ. ಮೌಲ್ಯಗಳ ಮಾತು ಹುಟ್ಟಿದ್ದು ಉದ್ಯಮಕ್ಕೆ ಪೂರಕವಾಗಿಯೇ ಹೊರತು ಅವುಗಳಿಗೆ ಯಾವ ಪ್ರಧಾನ್ಯವನ್ನೂ ಕೊಡಬೇಕೆಂಬ ಉದ್ದೇಶದಿಂದಲ್ಲ. ಇದು ಒಬ್ಬ ವ್ಯಕ್ತಿಯ ಸಮಸ್ಯೆ ಎನ್ನುವುದಕ್ಕಿಂತ ಉದ್ಯಮ–ಉದ್ಯಮಶೀಲತೆ ಹುಟ್ಟು ಹಾಕುವ ಮನೋಧರ್ಮದ ಸ್ವರೂಪವೇ ಹೀಗೆ ಇರುತ್ತದೆ ಎಂದು ಅರಿಯಬಹುದು.

ಉದ್ಯಮದ ಬಗ್ಗೆ ಜವಾಬ್ದಾರಿಯನ್ನು ಹೆಚ್ಚಿಸಲು, ತನ್ನದೇ ಉದ್ಯಮದ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ಈ ಉದ್ಯಮಿ ಐದುನೂರು ವರ್ಷಗಳ ಆಚೆಗೆ ಕನಸು ಕಾಣಿರಿ ಎಂದು ಸಲಹೆ ನೀಡುತ್ತಾರೆ. ಈ ಮಾತನ್ನು ಅವರು ತಮ್ಮ ಸಿಬ್ಬಂದಿಗೇ ಹೆಚ್ಚು ಅನ್ವಯಿಸಿ ಮಾತನಾಡುತ್ತಿದ್ದರು ಎಂದು ಕಾಣುತ್ತದೆ. ಇವರ ಉದ್ಯಮದ ಅನುಯಾಯಿಗಳು ಹೀಗೆ ಮುಂದಾಲೋಚನೆ ಮಾಡುತ್ತ, ಮುಂದಾಳತ್ವವನ್ನು ವಹಿಸುತ್ತ ಕೆಲಸ ಮಾಡಿದರೆ ತಾನೆ ಅವರ ಉದ್ಯಮ ನಿರಂತರ ಬೆಳೆಯಲು ಸಾಧ್ಯ!

ಐದುನೂರು ವರ್ಷಗಳ ನಂತರ ಪರಿಸರ ಹೇಗಿರಬೇಕು ಎಂಬ ಬಗ್ಗೆ ನಿಜವಾದ ಕಳಕಳಿ ಇವರಿಗೆ ಇದೆಯೆ? ಇಂದಿನ ವಾಸ್ತವ ಪರಿಸ್ಥಿತಿಯ ಮುಂದುವರಿದ ಭಾಗ ಹೇಗಿರುತ್ತದೆ ಎಂದು ಇವರು ಊಹಿಸಲಾರರೆ? ಆದರೆ ಇವರಿಗೆ ಆ ವಿಚಾರ ಬೇಕಿಲ್ಲ. ಈಗ ನನ್ನ ಮುದ್ದು ಆಲೋಚನೆ "ದೊಡ್ಡದು ಮತ್ತೂ ದೊಡ್ಡದು" ಎಂಬ ಕನಸು ಕಾಣುತ್ತ ಬೆಳೆಯುತ್ತಲೇ ಇರಬೇಕು. ಐದುನೂರು ವರ್ಷದಾಚೆಗೆ ಕನಸುಕಾಣಿ ಎನ್ನುತ್ತಿರುವ ಇವರಿಗೆ ವರ್ತಮಾನದಲ್ಲೇ ದುರಂತಮಯವಾಗಿರುವ ನಮ್ಮ ಪರಿಸರ ಕಣ್ಣಿಗೇ ಕಾಣುತ್ತಿಲ್ಲ!

ಈ ಚರ್ಚೆಯ ಹಿನ್ನಲೆಯಲ್ಲಿ ಎರಡು ಮುಖ್ಯ ಅಂಶಗಳನ್ನು ಚರ್ಚಿಸಬೇಕು. ಮೊದಲನೆಯದಾಗಿ ಉದ್ಯಮ ಎಂಬುದು ಉಳಿಯಬೇಕಾದರೆ ಅದು ಸದಾ ಕಾಲವೂ ವಿಸ್ತರಿಸುತ್ತಲೇ ಇರಬೇಕು. ಇದು ಕ್ಯಾನ್ಸರ್ ರೋಗದಂತೆ. ಈ ವಿಸ್ತಾರ ಒಂದು ಅಸಹಜ ಬೆಳವಣಿಗೆ, ಅನಾರೋಗ್ಯ ಮನಸ್ಸಿನ ಆಶಯ. ಮನುಷ್ಯದೇಹದ ವಿಚಾರವಾಗಿ ನೋಡುವುದಾದರೆ ಅವನು ಕೆಲವು ಕಾಲ ಬೆಳೆದ ಬಳಿಕ ಮತ್ತಷ್ಟು ವಿಸ್ತಾರಗೊಳ್ಳುವ ಪ್ರಕ್ರಿಯೆಯನ್ನು ನಿಲ್ಲಿಸಿ ಬದುಕಲು ಪ್ರಾರಂಭಿಸುತ್ತಾನೆ. ಕೊನೆಗೆ ಸಾಯುವುದು ಸ್ವಾಭಾವಿಕ. ಉದ್ಯಮಗಳೂ ಹೀಗೇ ಆದರೆ ಒಳಿತು. ಹೊಸ ಮನುಷ್ಯರು ಈ ಜಗತ್ತಿಗೆ ಸೇರುವಂತೆ

ಹಳೇ ಉದ್ಯಮಗಳು ಸತ್ತು ಹೊಸ ಉದ್ಯಮಗಳು ತಲೆ ಎತ್ತುತ್ತವೆ. ಸದಾ ಬದುಕುತ್ತ ಸದಾ ವಿಸ್ತಾರಗೊಳ್ಳುವುದು ಮನುಷ್ಯನ ಗುಣ ಅಲ್ಲ. ಅದು ಜೀವಿಗಳ ಲಕ್ಷಣವೂ ಅಲ್ಲ. ಅದು ಹಿರಣ್ಯಕಶಿಪುವಿನಂತಹ ರಾಕ್ಷಸನ ಅವಾಸ್ತವ ಆಶಯ. ಇಂತಹ ಒಂದು ಉದ್ಯಮದ ಕಾಣ್ಕೆಗೆ ಮೌಲ್ಯದ ಬಣ್ಣ ಕಟ್ಟಿದ ಮಾತ್ರಕ್ಕೆ ಅದು ತನ್ನ ಪಾಪಗಳನ್ನು ತೊಳೆದುಕೊಂಡು ಶುಭ್ರವಾಗಿಬಿಡಲು ಸಾಧ್ಯವಿಲ್ಲ. ಮೌಲ್ಯವೇ ಪ್ರಧಾನವಾಗಿ, ಉದ್ಯಮ ಎರಡನೆಯ ಸ್ಥಾನಕ್ಕೆ ಸೇರಿದರೆ ಯಾರೂ ದೊಡ್ಡ ಬಹುದೊಡ್ಡ ಉದ್ಯಮಗಳನ್ನು ಕಟ್ಟಲು ಇಂದಿನ ಸಾಮಾಜಿಕ ಸ್ಥಿತಿಗತಿಗಳಲ್ಲಿ ಸಾಧ್ಯವೇ ಇಲ್ಲ. ಅಲ್ಲದೆ ಈ ಭಾಷಣಕಾರ ಹೇಳಿದ ಮತ್ತೊಂದು ಕಿವಿಮಾತು ಎಂದರೆ 'ಸರ್ಕಾರದೊಡನೆ ವಿರಸ ಕಟ್ಟಿಕೊಳ್ಳಬೇಡಿ.' ಈ ಮಾತಿನ ಹಿಂದೆಯೇ ಆತ ಹೇಳಿದ್ದು, 'ಹಾಗೆಂದರೆ ಅಧಿಕಾರಿಗಳ ಕೈಗೆ ಬೆಣ್ಣೆ ಹಚ್ಚಿ ಎಂದು ಇದರರ್ಥವಲ್ಲ.' ಆದರೆ ಇಂದು ನಮ್ಮ ಸಾಮಾಜಿಕ–ರಾಜಕೀಯ ಪರಿಸರದಲ್ಲಿ ಕಟ್ಟುನಿಟ್ಟಾದ ಮೌಲ್ಯವಂತರಿಗೆ ಅತಿ ದೊಡ್ಡದಾದ ಉದ್ಯಮವನ್ನು ಕಟ್ಟುವುದು ಸಾಧ್ಯವೇ ಇಲ್ಲ.

ಮುಖ್ಯವಾದ ಪ್ರಶ್ನೆ ಏನೆಂದರೆ ಅನಿರ್ಬಂಧಿತವಾದ ಆರ್ಥಿಕ ಪ್ರಗತಿ ಮತ್ತು ಸುಸ್ಥಿರ ಸಮಾಜ ಎರಡೂ ಒಟ್ಟಿಗೆ ಹೋಗುವುದು ಸಾಧ್ಯವಿಲ್ಲ. ದುರಾಸೆ ಪ್ರಧಾನವಾದ ಬದುಕು ಎಲ್ಲೆಲ್ಲೂ ತಾಂಡವವಾಡುತ್ತಿರುವ ಇಂದಿನ ಸಾಮಾಜಿಕ ಪರಿಸರದಲ್ಲಿ ಅಪಾರ ಹಣ ಸಂಪಾದಿಸಿಯೂ ಸಂಯಮದಿಂದ ಬದುಕಬಲ್ಲವರು ಎಲ್ಲೋ ಕೆಲವರು. ನಮ್ಮ ಈ ಭಾಷಣಕಾರನೂ ವೈಯಕ್ತಿಕ ಬದುಕಿನಲ್ಲಿ ಸರಳನಾಗಿರುವುದನ್ನು ಯಾರೂ ಪ್ರಶ್ನಿಸುವುದಿಲ್ಲ. ಆದರೆ ಯಾವ ಆದರ್ಶವನ್ನು ಈತ ತನ್ನ ಉದ್ಯಮಶೀಲತೆಯನ್ನು ಸಮರ್ಥಿಸಿಕೊಳ್ಳಲು ಪ್ರತಿಪಾದಿಸುತ್ತಿದ್ದಾನೆಯೋ ಆ ಆದರ್ಶ ಪೃಥ್ವಿಯನ್ನು ಬಹಳ ಕಾಲ ಹಸಿರಾಗಿ ಇಡುವುದಿಲ್ಲ ಎಂಬುದಂತೂ ಎಲ್ಲರಿಗೂ ತಿಳಿಯುವ ವಿಷಯ. ಸರಳ ಸಜ್ಜನ ಮನುಷ್ಯನೂ ಆಂತರಿಕವಾಗಿ ಭ್ರಷ್ಟನಾಗುವುದಕ್ಕೆ ಅವನ ಉದ್ಯಮ ಮತ್ತು ಉದ್ಯಮಶೀಲತೆಯೇ ಕಾರಣ. ಉದ್ಯಮಗಳು ಬೆಳೆಯುತ್ತ ಬೆಳೆಯುತ್ತ ಹೇಗೆ ಮಾಂತ್ರಿಕ ರೂಪಪಡೆಯುತ್ತವೆ ಎಂದು ಕಾರ್ಲ್‌ಮಾರ್ಕ್ಸ್ ವಿವರಿಸುತ್ತಾನೆ. ಬಂಡವಾಳಶಾಹಿ ಉದ್ಯಮಗಳು ಬೃಹತ್ ಉತ್ಪಾದನಾ ಕೇಂದ್ರಗಳಾಗಿ ಬೆಳೆಯುತ್ತ ತಮ್ಮ ಜನಕನ ನಿಯಂತ್ರಣವನ್ನು ಮೀರಿ ಬೆಳೆಯುತ್ತವೆ. ಇದು ಹೇಗೆಂದರೆ ಮಂತ್ರವಾದಿಯ ಮಾಂತ್ರಿಕ ಆಟಗಳು ಕೊನೆಗೆ ತಾವೇ ತಾವಾಗಿ ವಿಜೃಂಬಿಸುತ್ತಾ ಮಂತ್ರವಾದಿಯ ಹತೋಟಿಯನ್ನು ಮೀರುವಂತೆ ಎನ್ನುತ್ತಾನೆ ಮಾರ್ಕ್ಸ್.

ಆದ್ದರಿಂದಲೇ ದೊಡ್ಡ ಉದ್ಯಮಗಳಲ್ಲಿ 'ಇವಿಲ್' ಅಥವ 'ಕೆಡುಕು' ಎಂಬುದು ಅಂತರ್ಗತವಾಗಿದೆ, ಅದನ್ನು ಸಾಮಾಜೀಕರಣ ಮಾಡಿದಾಕ್ಷಣ ಉದ್ಯಮಗಳಿಂದಾಗಿ ಅನಿವಾರ್ಯವಾಗಿ ಉಂಟಾಗುವ ಕೆಟ್ಟ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಗಾಂಧೀಜಿ ಹೇಳುತ್ತಿದ್ದರು. ಬಂಡವಾಳಶಾಹಿಗಳು ಬೃಹತ್ ಉದ್ಯಮಗಳಿಗೆ ಕೊಡುವ ಸಮಜಾಯಿಷಿ ಎಂದರೆ ಸಾಮಾಜೀಕರಣದಿಂದ ಎಲ್ಲರಿಗೂ ಸಮಪಾಲು ಎಂಬುದು. ಈ ಮಿಥ್ಯೆಯನ್ನು ಕುರಿತು ಗಾಂಧೀಜಿ ಹೀಗೆ ಹೇಳುತ್ತಾರೆ– "ಪಂಡಿತ

ನೆಹರೂ ಕೈಗಾರಿಕೀಕರಣವನ್ನು ಬಯಸುತ್ತಾರೆ. ಏಕೆಂದರೆ ಇದನ್ನು ಸಾಮಾಜೀಕರಣಗೊಳಿಸಿದರೆ ಬಂಡವಾಳಶಾಹಿ ಕೆಡುಕುಗಳಿಂದ ಇದನ್ನು ಮುಕ್ತವಾಗಿಸಬಹುದು ಎಂದು. ನನ್ನ ಅಭಿಪ್ರಾಯವೇನೆಂದರೆ ಕೈಗಾರಿಕೀಕರಣದಲ್ಲಿ ಕೆಡುಕುಗಳು ಅಂತರ್ಗತವಾಗಿವೆ. ಎಷ್ಟೇ ಸಾಮಾಜೀಕರಣ ಮಾಡಿದರೂ ಕೈಗಾರಿಕೀಕರಣದ ಕೆಡುಕುಗಳನ್ನು ತಪ್ಪಿಸಲಾಗದು".

ಅವರು ಮತ್ತೆ ಹೇಳುತ್ತಾರೆ: "ಮನುಷ್ಯ ತನ್ನ ನಿಜವಾದ ಆವಶ್ಯಕತೆಗಳನ್ನು ಗುರುತಿಸಿ ಅದನ್ನು ಪಡೆದುಕೊಂಡು ತೃಪ್ತನಾಗಿರಬೇಕು. ಈ ನಿಯಂತ್ರಣವನ್ನು ಅವನು ಸಾಧಿಸದೆ ಇದ್ದರೆ ಅವನು ತನ್ನನ್ನೇ ತಾನು ಕಾಪಾಡಿಕೊಳ್ಳಲಾರ." ಗಾಂಧಿಜಿಯವರ ಮತ್ತೊಂದು ಮಾತನ್ನು ನೆನೆದು ಈ ಅಧ್ಯಾಯವನ್ನು ಮುಗಿಸಬಹುದು – "ನಿಮಗೆ ಒಂದು ಸಿದ್ಧಮಂತ್ರವನ್ನು ಕೊಡುತ್ತೇನೆ. ಸಂದಿಗ್ಧ ಪರಿಸ್ಥಿತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಕಷ್ಟಕರವಾದಾಗ ಅಥವಾ 'ನಾನತ್ವ'ವೇ 'ನಾನು' ಎನ್ನುವುದೇ ಹೆಚ್ಚಾಗಿ ನಿಮ್ಮನ್ನು ಆವರಿಸಿಕೊಂಡಿದೆ ಎಂದು ನಿಮಗೆ ಅನಿಸಿದಾಗ ಈ ಕೆಳಗಿನ ಪರೀಕ್ಷೆಗೆ ನಿಮ್ಮನ್ನೇ ನೀವು ಒಡ್ಡಿಕೊಳ್ಳಿ–

ಹಿಂದೆ ನೀವು ಕಂಡ ಅತ್ಯಂತ ಬಡವನ, ದೀನನ ಮುಖವನ್ನು ನೆನೆಯಿರಿ. ಅನಂತರ ನೀವು ತೆಗೆದುಕೊಳ್ಳುತ್ತಿರುವ ನಿರ್ಧಾರ, ಹೊಸ ಹೆಜ್ಜೆ ಈ ಮನುಷ್ಯನಿಗೆ ಉಪಯೋಗಕ್ಕೆ ಬರುತ್ತದೆಯೇ ಎಂದು ಯೋಚಿಸಿ. ಅವನು ಇದರಿಂದ ಏನಾದರೂ ಪಡೆಯುತ್ತಾನೆಯೇ? ತನ್ನ ಬದುಕನ್ನು ತಾನೇ ನಿಯಂತ್ರಿಸಿಕೊಳ್ಳಬಲ್ಲನೆ, ಬದುಕನ್ನು ಬದಲಿಸಿಕೊಳ್ಳಬಲ್ಲನೇ ಎಂದು ಯೋಚಿಸಿ. ಒಟ್ಟಿನಲ್ಲಿ ಹೇಳಬೇಕೆಂದರೆ ಇದು ಹಸಿದವನಿಗೆ ಅಥವಾ ಆಧ್ಯಾತ್ಮಿಕ ಬಡತನದಲ್ಲಿ ನರಳುತ್ತಿರುವ ಲಕ್ಷಾಂತರ ಜನಕ್ಕೆ ಸ್ವರಾಜ್ಯ ದೊರಕಿಸಿ ಕೊಡುತ್ತಿದೆಯೇ ಎಂದು ಆಲೋಚಿಸಿ. ಆಗ ನಿಮ್ಮನ್ನು ಕಾಡುವ ಅನುಮಾನಗಳು ಮಾಯವಾಗುತ್ತವೆ. ಅತಿಯಾಗಿ ನಿಮ್ಮನ್ನು ಆವರಿಸಿಕೊಂಡಿದ್ದ ನಾನು, ನನ್ನದು ಎಂಬ ಭಾವನೆ ಕರಗಿ ಹೋಗುತ್ತದೆ."